doc-5815
T.P-2

ಗೋರಕ್ಷಣಿ

GORAKSHANA

8ನೇ ವರ್ಷ — 1958 ನೇ ಜೂನ್ ತಾ || 28 June 58

ಗೋರಕ್ಷಣಾ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಪರಸ್ಥಳಕ್ಕೆ 6 ಆಣೆ ಮೈಸೂರಿನಲ್ಲಿ 4 ಆಣೆ ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇಸಾರಿ) ಮಾತ್ರ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಬಾಲಕ ಶಿವಾಜಿಯ ಗೋಭಕ್ತಿ

ಶಿವಾಜಿಯು ಏಂಟು ಹತ್ತು ವರ್ಷ ವಯಸ್ಸಿನ ಚಿಕ್ಕ ಬಾಲಕನಾಗಿದ್ದನು. ಒಂದು ಸಲ ಅವನು ತನ್ನ ತಂದೆ ಶಾಹಜಿಯನ್ನು ನೋಡಲಿಕ್ಕಾಗಿ ಪೂನಾದಿಂದ ಬಿಜಾಪುರಕ್ಕೆ ಹೋದನು. ಮಗನನ್ನು ನೋಡಿ ಶಾಹಜಿಗೆ ತುಂಬಾ ಸಂತೋಷವಾಯಿತು. ಅವರು ಶಿವಾಜಿಯನ್ನು ಬಾದಷಹರ ದರ್ಬಾರಿಗೆ ತನ್ನೊಂದಿಗೆ ಕರಕೊಂಡುಹೋಗಲು ಬಯಸಿದರು. ಒಂದು ದಿನ ಅವನನ್ನು ಕರೆದು 'ಶಿವಾ, ನೀನು ನಾಳೆಯಿಂದ ಯಾವಾಗಲೂ ನನ್ನೊಟ್ಟಿಗೆ ಬಾದಷಹರ ದರ್ಬಾರಿಗೆ ಬರಬೇಕು' ಎಂದು ಹೇಳಿದರು.

ರಾಮಾಯಣ, ಮಹಾಭಾರತ ಕಥೆಗಳನ್ನು ಕೇಳಿ ಚಿಕ್ಕಂದಿನಿಂದಲೇ ಶಿವಾಜಿಗೆ ತಾಯಿತಂದೆಗಳ ಮೇಲೆ ತುಂಬಾ ಭಕ್ತಿಯಿತ್ತು ; ವಿನಯಶೀಲನೂ ಆಗಿದ್ದನು ತಂದೆಯ ಮಾತನ್ನು ಅಲ್ಲಗಳಿಯಬಾರದೆಂದು ಅರಿತಿದ್ದನು ಅವರ ಪ್ರತಿಯೆಂದು ಆಜ್ಞೆಯನ್ನು ಪಾಲಿಸಿ ಅವರನ್ನು ಪ್ರಸನ್ನಗೊಳಿಸಬೇಕೆಂದು ಆಸೆ ಪಡುತ್ತಿದ್ದನು ಆದರೆ ಸಂದರ್ಭ ಮಾತ್ರ ಅತನಿಗೆ ಉಭಯ ಸಂಕಟ ತಂದೊಡ್ಡಿತು. ದರ್ಬಾರಿಗೆ ಹೋಗಲು ಹೃದಯವು ಸರ್ವಥಾ ಒಪ್ಪುತ್ತಿರಲಿಲ್ಲ ಹಾಗೆಯೇ ತಂದೆಯ ಮಾತನ್ನು ವಿಾರುವುದಕ್ಕೂ ಮನಸ್ಸು ಸಮ್ಮತಿಸುತ್ತಿರಲಿಲ್ಲ ಕೊನೆಗೆ ಅವನು ತಂದೆಯೊಡನೆ ನಮ್ರತೆಯಿಂದ ಹೇಳಿದನು— 'ತಂದೆಯವರೇ, ನಾವು ಹಿಂದುಗಳು, ದರ್ಬಾರಿಗೆ ಹೋಗುವ ದಾರಿಯಲ್ಲಿ ನಮ್ಮ ಕಣ್ಣು ಮುಂದೆಯೇ ಗೋವಾತೆಯ ವಧೆ ನಡೆಯುತ್ತದೆ. ಗೋಮಾಂಸ ಮಾರಲ್ಪಡುತ್ತದೆ : ಈ ಅಸಹ್ಯ ದೃಶ್ಯವನ್ನು ಕಂಡು ನನಗೆ ವ್ಯಥೆಯಾಗುತ್ತದೆ ; ಗೋಹತ್ಯಕಾರರ ತಲೆ ಕಡಿದುಬಿಡಬೇಕೆನ್ನಿಸುತ್ತದೆ ; ನಾವು ಕ್ಷತ್ರಿಯರಾಗಿಯೂ ಗೋವಧೆಯನ್ನು ನೋಡುತ್ತಾ ಸುಮ್ಮನಿರುವುದೇ ? ನಾವು ಗೋವುಗಳ ಪ್ರಾಣ ರಕ್ಷಿಸಬೇಕು ; ಅಲ್ಲವೇ ಅವಕ್ಕಾಗಿ ನಮ್ಮ ಪ್ರಾಣ ತೆರಬೇಕು ; ನಾನು ಹಾಗೆ ಮಾಡಿದರೆ ನೀವು ಕೋಪಗೊಳ್ಳಬಹುದೆಂದು ಅಂಜಿಕೆಯಾಗುತ್ತದೆ ; ನಾನು ದರ್ಬಾರಿಗೆ ಹೇಗೆ ಬರಲಿ ?' — ಶಿವಾಜಿಯು ಈ ಮಾತುಗಳನ್ನು ಕೇಳಿ ಶಾಹಜೀ ಸುಮ್ಮನಾಗಿ ಬಿಟ್ಟರು.

ಬಾಲಕ ಶಿವಾಜಿಯ ಹೃದಯದ ಈ ವ್ಯಥೆಯು ಸುದ್ದಿ ಬಾದಷಹರ ತನಕವೂ ಹೋಯಿತು. ಅವರು ಆ ತೇಜಸ್ವೀ ಹಿಂದೂ ಬಾಲಕನನ್ನು ನೋಡಲು ಉತ್ಸುಕರಾದರು ಅದಕ್ಕಾಗಿ ದರ್ಬಾರಿಗೆ ಹೋಗಿ ಬರುವ ದಾರಿಯಲ್ಲಿದ್ದ ಎಲ್ಲ ಮಾಂಸದ ಅಂಗಡಿಗಳೂ ಬೇರೆ ಬೀದಿಗೆ ತೆಗೆದುಕೊಂಡು ಹೋಗಬೇಕೆಂದೂ, ದಾರಿಯಲ್ಲಿ ಯಾರೂ ಮಾಂಸ ಮಾರಕೂಡದೆಂದೂ ಆಜ್ಞೆಯಿತ್ತರು. ಈ ಏರ್ಪಾಡಾದನಂತರ ಶಿವಾಜಿಯು ದರ್ಬಾರಿಗೆ ಹೋಗತೊಡಗಿದನು.

ಸ್ವಲ್ಪ ದಿನ ಕಳೆದ ಬಳಿಕ ಕೆಲವರು ಬಾದಷಹರ ಹುಕುಮನ್ನು ಕಡೆಗಣಿಸಿ ಅದೇ ದಾರಿಯಲ್ಲಿ ಗೋಮಾಂಸ ಮಾರತೊಡಗಿದರು ಇದನ್ನು ಕಂಡು ಶಿವಾಜಿಯು ದರ್ಬಾರಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟನು ಅವನು ಬಾರದಿದ್ದುದನ್ನು ತಿಳಿದ ಬಾದಷಹರು ಶಾಹಜಿಯೊಡನೆ 'ಹುಡುಗ ಏಕೆ ಬರಲಿಲ್ಲ' ಎಂದು ಕೇಳಿದರು ಶಾಹಜಿಯು ದಾರಿಯಲ್ಲಿ ಗೋಮಾಂಸ ವಿಕ್ರಯ ನಡೆಯುತ್ತಿರುವುದನ್ನು ತಿಳಿಸಿದರು. ಅದನ್ನು ಕೇಳಿ ಅವರು ತುಂಬಾ ಕ್ರೋಧಾವೇಶಗೊಂಡು 'ಆ ದಾರಿಯಲ್ಲಿ ಗೋಮಾಂಸ ಮಾರಲು ಯಾರೂ ಬರಕೂಡದೆಂದೂ, ಹಾಗೆ ಬಂದವರಿಗೆ ಕಠೋರ ದಂಡನೆ ವಿಧಿಸಲಾಗುವುದೆಂದೂ' ಮತ್ತೊಮ್ಮೆ ಹುಕುಂ ಹೊರಡಿಸಿದರು.

ಒಬ್ಬ ಅಹಂಕಾರಿ ಕಟುಕನು ಒಂದು ದಿನ ಹಟ್ಟಿಹಿಡಿದು ಅದೇ ದಾರಿಯಲ್ಲಿ ಗೋವಧೆಯ ಮಾಂಸ ಮಾರಲು ಪ್ರಾರಂಭಿಸಿದನು ; ಅದನ್ನು ನೋಡಿ ಶಿವಾಜಿಗೆ ತುಂಬಾ ಕೋಪ ಬಂತು : ಒಡನೆ ಬಾಲಕ ಶಿವಾಜಿಯು ತನ್ನ ತಳವಾರನಿಂದ ಆ ಧೂರ್ತ ಕಟುಕನ ತಲೆಯನ್ನು ಕಡಿಸಿ ಎಸೆಸಿಬಿಟ್ಟನು. ಸತ್ತವನ ಸಂಬಂಧೀಕರು ಬಾದಶಾಹರ ಹತ್ತಿರ ಫಿರ್ಯಾದು ಮಾಡಿಕೊಂಡರು ; ಆದರೆ ಬಾದಷಹರು 'ಶಿವಾಜಿಯು ನಿರಪರಾಧಿ, ಆ ಧೂರ್ತ ಕಟುಕನೇ ಅಪರಾಧಿ' ಎಂದು ಖೇರ್ಮಸಿ ಎತ್ತು ಫಿರ್ಯಾದಿಯನ್ನು ತೆಗೆದು ಹಾಕಿದರು.

ಅಂದಿನಿಂದ ಬಾಲಕ ಶಿವಾಜಿಯ ಗೋಭಕ್ತಿಯು ಊರೆಲ್ಲೆಲ್ಲಾ ಪ್ರಸಿದ್ಧವಾಯಿತು. (ಸಾಂಥಿ)

ಇಚ್ಛಾ ಸಹಿತವಾದ ಕೃತ್ಯ

ಯಾವ ಕಾರಣವೂ ಇಲ್ಲದೆ ಬೇರೊಂದು ಪ್ರಾಣಿಗೆ ಹಿಂಸೆಯನ್ನು ಕೊಡುವುದು ಐಚ್ಛಿಕ ಕೃತ್ಯವೆನ್ನಲ್ಪಡುವುದು. ಇದು ಮಹಾ ಪಾತಕಗಳಲ್ಲಿ ಮಹಾಪಾಪವು. ಇದು ಮನುಷ್ಯನ ಕೆಲಸವಲ್ಲ, ದೆವ್ವವು ಮಾಡಬೇಕಾದುದ್ದು ಮನುಷ್ಯರು ದಿನಂಪ್ರತಿ ಈ ಪಾಪವನ್ನು ಮಾಡುತ್ತಿರುವರು —

ಪೋಪ್ ಅನುಯಾಯಿಗಳು ಅದನ್ನು ಮಾಡಿದರು ತಮ್ಮ ಮತಗಳ ಪ್ರಚಾರ ಸಮಯದಲ್ಲಿ ಅನೇಕ ಮತಗಳ ಮುಖಂಡರು ಇದನ್ನು ಮಾಡಿದರು, ಜೀವಂತವಾದ ಪ್ರಾಣಿಯ ಶರೀರವನ್ನು ಭೇದಿಸುವಂಥವರು ಇದನ್ನು ಮಾಡುವರು. ಎಷ್ಟೋ ಮಂದಿ ಉಪಾಧ್ಯಾಯರು ಸ್ವಾಭಾವಿಕವಾಗಿ ಮಾಡುವರು ದೇವರ ಮಕ್ಕಳನ್ನು ಆಟದ ಹೆಸರಿನಲ್ಲಿ ಕೊಲ್ಲುವಂಥವರು ಮಾಡುತ್ತಿರುವರು ಇನ್ನೊಬ್ಬರ ಮನಸ್ಸನ್ನು ನೋಯಿಸಬೇಕೆಂಬ ಉದ್ವೇಶದಿಂದ ಮಾತನಾಡುವಂಥವರು ಮಾಡುತ್ತಿರುವರು ಯಜ್ಞದ ಹೆಸರಿನಲ್ಲಿ ಪಶುವಧೆಯನ್ನು ಮಾಡಿಸುವರು, ಮಾಡುತ್ತಿರುವರು ಆಹಾರ ರೂಪದಲ್ಲಿ ಪ್ರಾಣಿಗಳನ್ನು ಪ್ರಯೋಗಿಸುವಂಥವರು ಮಾಡುತ್ತಿರುವರು.

ಮೂಢ ನಂಬಿಕೆ — ಕೃತ್ಯ ಭಾರದ ತಲೆಯ ಮೇಲಿನ ದೊಡ್ಡ ಭಾರವು ಇದು ಇದಕ್ಕೆ ಗುಲಾಮನಾಗಿರುವವನು ಬುದ್ಧಿವಂತರಾದವರನ್ನು ಕೂಡ ದ್ವೇಷಿಸುತ್ತಾನೆ ತಾನು ಮಾಡುವಂತೆಯೇ ಇತರರೂ ಮಾಡಬೇಕೆಂದು ಬಲವಂತ ಮಾಡುತ್ತಾನೆ. ಪ್ರೇಮರೂಪನಾದ ದೇವರ ಹೆಸರಿನಲ್ಲಿ ಅನೇಕ ಕ್ರೂರ ಕಾರ್ಯಗಳು ನಡೆದಿವೆ ಇದಕ್ಕೆ ಮೂಢ ನಂಬಿಕೆಯೇ ಕಾರಣವಾಗಿದೆ

ಉದಾಹರಣೆಗಳು —

ಪ್ರಾಣಿಗಳನ್ನು ಆಹುತಿಯಾಗಿ ಅರ್ಪಿಸಬೇಕೆಂಬ ಮೂಢನಂಬಿಕೆ ಮನುಷ್ಯನಿಗೆ ಮಾಂಸಾಹಾರವು ಅತ್ಯವಶ್ಯಕವೆಂಬ ಮೂಢ ನಂಬಿಕೆ ಹರಿಜನರನ್ನು ಅನ್ಯಜಾತಿಯವರನ್ನು, ಅನ್ಯ ದೇಶೀಯರನ್ನು, ಅನ್ಯ ವರ್ಣದವರನ್ನು, ಅನ್ಯ ಸಂಪ್ರದಾಯದವರನ್ನು, ಅನ್ಯ ಭಾಷೆ ನುಡಿಯುವವರನ್ನು, ಅನ್ಯದೇವರನ್ನು ಪೂಜಿಸುವವನನ್ನು ಹೃದಯ ವಿದ್ರಾವಕವಾಗುವ ರೀತಿಯಲ್ಲಿ ಕಾಣುವಿಕೆ ಮತ್ತು ಅವರ ವಿಷಯದಲ್ಲಿ ಆ ರೀತಿಯಲ್ಲಿ ಪ್ರವರ್ತಿಸುವಿಕೆ.

ನಿಜವಾದ ವಿವೇಕಿಯು ಈ ಎಲ್ಲ ರೀತಿಯ ಕೃತ್ಯಗಳಿಂದ ದೂರನಾಗಿರಬಲ್ಲನು. (ಓಂ)

ರಾಷ್ಟ್ರೀಯ ದಾಖಲೆ ಸ್ಥಾಪನೆ

ಅನೇರಿಕಾ ವ್ಯವಸಾಯ ಶಾಖೆಯು 4 ವರ್ಷದ ಪೋಲ್ಸ್‌ಟಂ ಹಸುವು ಳೆದ ವರ್ಷ 1176 ಪೌಂಡ್‌ಗಳ ಬೆಣ್ಣೆ ಉತ್ಪಾದಿಸಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದೆ.

ಅಸ್ಟ್ರೀಯಾದಲ್ಲಿ ನಾಯಿಗಳ ಆರ್ಭಟ

ಪ್ರತಿದೊಡ್ಡ ಪಟ್ಟಣದಲ್ಲಿಯೂ ಕೆಲವು ಮನೆಗಳ ಮುಂದೆ ಗೇಟಿಗೆ ಬೋರ್ಡ್‌ಗಳನ್ನು ತಗಲಿಸಿರುವರು ಪಂಥ್ಯಾನದಲ್ಲಿ ಈ ಬೋರ್ಡ್‌ಗಳನ್ನು ನೋಡದೆ ಮನೆಯೊಳಗೆ ಕಾಲಿಟ್ಟಲ್ಲಿ ಅವು ಕಚ್ಚುತ್ತವೆ ನಾಯಿಗಳವೆ ಜಾಗ್ರತೆ ಎನ್ನುವ ಬೋರ್ಡುಗಳು, ದೈಲು ಪೆಟ್ಟಿಗೆಯಲ್ಲಿ ಕಳ್ಳರಿರುವರು ಜಾಗ್ರತೆ ಎಂಬ ವಿಷಯವನ್ನು ನೆನಪಿಗೆ ತರುತ್ತದೆ ಕಳ್ಳರು ಬಾರದಂತೆ ಜಾಗರೂಕತೆಯಿಂದಿರಲು ಒಳ್ಳೆ ಜಾತಿ ನಾಯಿಗಳನ್ನು ಬೆಳೆಸುತ್ತಾರೆ ಆ ನಾಯಿಗಳು ಬಜಾರಿದಲ್ಲಿ ನಡೆಯುತ್ತಿದ್ದರೆ ಅವುಗಳ ಠೀವಿ ನೋಡಿ ಗಾಭರಿಗೊಳ್ಳುವೆವು

ಈ ನಾಯಿಗಳಿಂದ ನಾವು ಮನೆಗಳ ಒಳಗೆ ಪ್ರವೇಶಿಸಲು ಬಹಳ ಭಯವಾಗುತ್ತದೆ ಈ ನಾಯಿಗಳಿಂದ ಬಾಧೆಪಡುವವರಲ್ಲಿ ಪೋಸ್ಟ್‌ಮೆಸ್ಟ್ ಒಬ್ಬನು ಈ ಬಾಧೆಯು ಇಷ್ಟು ಅಷ್ಟು ಎಂದು ಹೇಳಲು ಸಾಧ್ಯವಿಲ್ಲ ಕಳ್ಳರು ಈ ನಾಯಿಗಳಿಂದ ಪಡುವ ಬಾಧೆಯು ವರ್ಣನಾತೀತವು

ಅಸ್ಟ್ರಿಯಾದ ಮುಖ್ಯ ಪಟ್ಟಣವಾದ ವಿಯನ್ನಾ ನಗರದಲ್ಲಿ ಒಬ್ಬ ಪೋಸ್ಟುಮೆಸ್ಟ್ ಮೇಲೆ ಬರುತ್ತಿದ್ದ ಒಂದು ದೇಟೆಯ ನಾಯಿಯು ಆ ಪೋಸ್ಟ್‌ಮೆಸ್ಟ್ ತನ್ನ ಕೈಯಲ್ಲಿದ್ದ ಕೋಲಿನಿಂದ ಹೊಡೆದು ಗಾಯಗೊಳಿಸಿದನು ಈ ಕಾರಣದಿಂದ ಆ ನಾಯಿಯ ಯಜಮಾನನಿಗೆ ಕೋಪ ಬಂದು, ಕೋರ್ಟಿನಲ್ಲಿ ಕೇಸು ಮಾಡಿದ್ದರಿಂದ ಪೋಸ್ಟ್ ಮಾಸ್ಟರ್ ಜನರಲ್ಲಾನೆ ವಿಧಿಸಲ್ಪಟ್ಟಿತು

ಕಳೆದ ವರ್ಷ 6200 ಪೋಸ್ಟ್ ಜವಾನರನ್ನು ನಾಯಿಗಳು ಕಡೆದಿರುವವರಂತೆ ಈ ಕಾರಣದಿಂದ ಡಾಕ್ಟರುಗಳಿಗೆ ಗಿರಾಕಿ ವರ್ಧಿಸಿರುವದಂತೆ.

ನಾಯಿಗಳ ಸಂಗಡ ವಿಶ್ವಾಸಕ್ಕಾಗಿ ಒಳ್ಳೆ ಮಂದಿ ಪೋಸ್ಟ್ ಜವಾನರು ಒಂದು ಯೋಚನೆ ಮಾಡಿರುವರು ದೇವರಾದರೂ ಕೂಡಾ ಲಂಚ ಕೊಟ್ಟಲ್ಲಿ ಈ

ಸುದ್ದಿಗಳು

ವೊಹ್ನವ್‌ನಲ್ಲಿ ಈಚೆಗೆ ನಡೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸು ಪಾರ್ಟಿಗೆ ಮತ್ತು ನಾಗರೀಕ ಸಮಿತಿಗೆ ತೀವ್ರ ಸ್ಪರ್ಧೆಯಿತ್ತು ಸಮಿತಿ ಬೆಂಬಲಿಗನಾದ ಒಬ್ಬ 30 ವರ್ಷದ ವರ್ತಕನು ಭಾರಿ ಜನರ ಗುಂಪಿನ ಮುಂದೆ ಕಾಂಗ್ರೆಸು ಉಮೇದವಾರ ಗೆದ್ದರೆ ತಾನು ಮಿಸೆ ಬಲಭಾಗ ಬೋಳಿಸುವುದಾಗಿ ಪ್ರತಿಜ್ಞೆ ಮಾಡಿದನು ಕಾಂಗ್ರೆಸು ಉಮೇದುವಾರನೇ ಗೆದ್ದುದರಿಂದ ತಾನು ಆಡಿದಂತೆ ನಡೆಯಬೇಕೆಂದು ವರ್ತಕನಿಗೆ ನೋಟೀಸು ಕೊಡಲಾಯಿತು ಈಗ ಮಿಸೆಯು ಬಲಭಾಗ ಇಲ್ಲದಿರುವದಾಗಿ ವರದಿ

ಂ ಂ

ಲಾಹೋರ್ 27 — ಕಾಶ್ಮೀರ ವಿಮೋಚನಾ ಚಳುವಳಿಯ ನಾಯಕ ಚೌಧುರಿ ಗುಲಾಂ ಅಬ್ಬಾಸರು ಈ ಬೆಳಿಗ್ಗೆ ರಾವಲ್ಪಿಂಡಿಯಲ್ಲಿ ಬಂಧಿತನಾದನು

ಂ ಂ

ನವದೆಹಲಿ 27 — ಸಕ್ಕರೆ ರಫ್ತಿಗೆ ರಾಷ್ಟ್ರಪತಿಗಳು ಸುಗ್ರೀವಾಜ್ಞೆ ಇತ್ತರು ಈ ಅವಧಿಯಲ್ಲಿ ಅರ್ಧ ಲಕ್ಷ ಟನ್ ಸಕ್ಕರೆ ಹೊರಕ್ಕೆ ಹೋಗುವದು

ಂ ಂ

ಬೊಂಬಾಯಿ 27 — ಎರಡು ದಿನಗಳ ಮಳೆಯಿಂದ ಪ್ರವಾಹ ಆಗಿ 5 ಜನ ಸತ್ತರು

ಂ ಂ

ಲಾಹೋರ್ 27 — ಅಬ್ಬಾಸರ ಬಂಧನ ಪ್ರತಿಭಟಿಸಿ ಕಾಶ್ಮೀರ ವಿಶೇಷ ಸಮಿತಿಗೆ ಮಾಜಿ ಪ್ರಧಾನಿ ಚೌಧುರಿ ಮುಹಮದಾಲಿ ರಾಜೀನಾಮೆ ಕೊಟ್ಟರು

ನಾಯಿಗಳು ವಶವಾಗುವೆಂದು ಅವುಗಳಿಗಾಗಿ ಉಪಯೋಗಿಸುವ ಬಿಸ್ಕತ್ತುಗಳೂ, ಸಿಹಿಯಾದ ಮಿಠಾಯಿಗಳೂ ಜೇಬಿನಲ್ಲಿಟ್ಟುಕೊಂಡು ಹೋಗಿ ಅವುಗಳ ಮುಂದೆ ಹಾಕುವಂತೆ

ಆಸ್ಟ್ರೀಯಾದಲ್ಲಿ ಈ ನಾಯಿಗಳಿಂದ ಹೆಚ್ಚು ಪ್ರಮಾದವು ಏರ್ಪಟ್ಟಿದೆ ಈ ನಾಯಿಗಳಿಂದ ಹೆಚ್ಚು ಪ್ರಮಾದವು ಏರ್ಪಟ್ಟಿದೆ ಈ ನಾಯಿಗಳಿಂದ ಹೆಚ್ಚು ಉಪಯೋಗವೂ ಇದೆ ವಿಯನ್ನಾದಲ್ಲಿ ಕಳೆದ ವರ್ಷ ಶವ್ವ ಮಾಡಿದ್ದಕ್ಕಾಗಿ ಅರೆಸ್ಟು ಮಾಡಲ್ಪಟ್ಟವರಲ್ಲಿ 100 ಕ್ಕೆ 80 ಮಂದಿ ನಾಯಿಗಳಿಂದ ಹಿಡಿಯಲ್ಪಟ್ಟವರೇ ಎಂದು ಆಸ್ಟ್ರೀಯಾ ವಾರ್ತಾ ಸಂಸ್ಥೆಯವರು ಪ್ರಚುರ ಪಡಿಸಿರುವ ಕರಪತ್ರ ತಿಳಿಸುತ್ತದೆ (ಗೋಸೇವ)

ವುಡ್‌ಲ್ಯಾಂಡ್ಸ್

27–6–58 ರಿಂದ

ಬಕ್ರಿದ್ ಹಬ್ಬದ ವಿಶೇಷ ಆಕರ್ಷಣೆ

ಸೂಪರ್ ಪಿಕ್ಚರ್ಸ್‌ರವರ

ನಯಾ ಪೈಸ

(ಹಿಂದಿ)

ತಾರಾಗಣ— ಜಾನಿವಾಕರ್, ಚಾಂದ್ ಉಷ್ಮಾನಿ, ಆಘ, ನಾದಿರ

ಭ್ರಾಂತಿವಿಲಾಸದಿಂದ ಕೂಡಿದ, ಹಾಸ್ಯ ವಿನೋದಗಳು ತುಂಬಿತುಳುಕುತ್ತಿರುವ ನಗುವಿನ ದೊಂಬಿಯು ಚಿಕ್ಕ.

ನೀವು ಸುಸ್ತಾಗುವವರೆಗೆ ನಗುವಿರಿ : ನಕ್ಕು ನಕ್ಕು ನಿಮ್ಮ ಕಾಪಡ್ಯಗಳನ್ನು ಮರೆಯಿರಿ

ದಿಗ್ದರ್ಶನ ಸಂಗೀತ
ಅಸ್ಪಿ ಮೊಹಿಂದರ್

[ದಿನವಹಿ 3 ಪ್ರದರ್ಶನಗಳು]

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾ ರ್ಮ ಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ಅಪೆರಾ—

27–6–58 ರಿಂದ

ಅವನ್ ಅಮರನ್

(ತಮಿಳು)

ಪಾತ್ರ— ಕೆ. ಆರ್. ರಾಮಸ್ವಾಮಿ, ಟಿ. ಎಸ್. ಬಾಲಯ್ಯ, ಸುಬ್ಬಯ್ಯ, ಫ್ರೆಂಡ್ ರಾಮಸ್ವಾಮಿ, ಸೇತೂರಾರ್ಮ, ರಾಜಾ ಸುಲೋಚನಾ, ಪಿ. ಕನ್ನಾಂಬ ಮುತ್ತುಲಕ್ಷ್ಮಿ ಮತ್ತು ಬೇಬಿ ಕಮಲಾ

ಪ್ರಥಮ ಏಕಾದಶಿ ಪ್ರಯುಕ್ತ ರಾತ್ರಿ 12 ವರೆ ಗಂಟೆಗೆ ವಿಶೇಷ ಆಟವಿದೆ

ಪ್ರತಿದಿನ 3 ಆಟಗಳು

Protect the cow

ಗೋಸಂರಕ್ಷಣೆಮಾಡಿ

ಗೋ ರಕ್ಷಣಾ ಕಾರ್ಯಕ್ಕೆ

ಹೆಚ್ಚು ಪ್ರಚಾರ ನಡೆಯಲಿ

Edited, Printed & Published by Dharma Prachara Nirata M S Krishna Rao, at the Satyavadi Press Chamrajpuram Mysore

SHAKTI

SUDHA

A Superb Tonic